ಶ್ರೀ ಎಸ್. ಸುರೇಶ್ ಕುಮಾರ್ : ಪುತ್ಥಳಿಯ ಬಗ್ಗೆ ಎಷ್ಟು ಖರ್ಚಾಗುತ್ತದೆ ಎನ್ನುವ ಸಂಪೂರ್ಣ ಮಾಹಿತಿಯ ಪ್ರಸ್ತಾವನೆ ಮೊದಲು ಬರಲಿ.

15) **ವಿಷಯ : ಸಗಾಯಿಪುರ ವಾರ್ಡಿನಲ್ಲಿರುವ ವೆಂಕಟಸ್ವಾಮಿ ಗಾರ್ಡನ್ ಬಳಿ ಡ್ರೈನೇಜ್ ಪೈಪು ಒಡೆದು ಹೋಗಿ, water pipe ನಲ್ಲಿ ಅದು ಮಿಕ್ಸ್ ಆಗಿ, 4 ವರ್ಷದ ಮಗುವೊಂದು ಮೃತಪಟ್ಟಿದ್ದು, ಮೃತರ ಕುಟುಂಬಕ್ಕೆ ಪರಿಹಾರ ಒದಗಿಸುವ ಬಗ್ಗೆ ಹಾಗೂ BWSSB ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವ ಬಗ್ಗೆ**

ಶ್ರೀ ಹೆಚ್.ಸಿ ಬಾಲಕೃಷ್ಣ (ಮಾಗಡಿ) : ಸಗಾಯಿಪುರ ವಾರ್ಡಿನಲ್ಲಿರುವ ವೆಂಟಕಸ್ವಾಮಿ ಗಾರ್ಡನ್ ಬಳಿ ಡ್ರೈನೇಜ್ ಪೈಪು ಒಡೆದು ಹೋಗಿ, water pipe ನಲ್ಲಿ ಅದು ಮಿಕ್ಸ್ ಆಗಿ, 4 ವರ್ಷದ ಮಗುವೊಂದು ಮೃತ ಪಟ್ಟಿದೆ, ಅನೇಕ ಜನ ಅಸ್ವಸ್ಥರಾಗಿದ್ದು ನಿನ್ನೆಯಿಂದ ಅಲ್ಲಿ ಗಲಾಟೆಗಳಾಗುತ್ತಿವೆ. ಸ್ಥಳೀಯ ಶಾಸಕರಾದ ಶ್ರೀ ಜಮೀರ್ ಅಹ್ಮದ್ ಖಾನ್‌ರವರು ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ಘೋಷಣೆ ಮಾಡಿ ಸ್ವಲ್ಪ ಮಟ್ಟಿಗೆ ಗಲಾಟೆಯನ್ನು ಕಡಿಮೆ ಮಾಡಿದ್ದಾರೆ. ಆ ಪೈಪು ಹಾಳಾಗಿ ಸುಮಾರು 10 ದಿವಸಗಳಾಗಿದ್ದು, ಈ ಬಗ್ಗೆ ಅಲ್ಲಿನ ಸಾರ್ವಜನಿಕರು BWSSB ಅಧಿಕಾರಿಗಳ ಗಮನಕ್ಕೆ ತಂದರೂ ಅದನ್ನು ಕ್ಲಿಯರ್ ಮಾಡದೆ, ಮಗು ಸತ್ತು ಹೋಗಿದೆ, ಅನೇಕ ಜನ ಅಸ್ವಸ್ಥರಾಗಿದ್ದಾರೆ. ದಯಮಾಡಿ ನೀವು ಆ ಮಗುವಿಗೆ ಪರಿಹಾರ ಘೋಷಣೆ ಮಾಡುತ್ತೀರೋ ಅಥವಾ BWSSB ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಈ ಬಗ್ಗೆ ನಿನ್ನೆ ರಾತ್ರಿಯಷ್ಟೇ ಮಾಹಿತಿ ತಿಳಿಯಿತು. ಇಂದು ಬೆಳಿಗ್ಗೆ ಸದನದ ಕಾರ್ಯಕಲಾಪಗಳು ಇರುವ ಕಾರಣದಿಂದ ಅಲ್ಲಿಗೆ ಭೇಟಿ ನೀಡುವುದಕ್ಕಾಗಲಿಲ್ಲ. ಈ ಸಂಬಂಧ ಅಲ್ಲಿನ ಸ್ಥಳೀಯ ಶಾಸಕರಾದ ಶ್ರೀ ಜಮೀರ್ ಅಹ್ಮದ್ ಖಾನ್ ಅವರನ್ನು ದೂರವಾಣಿ ಮುಖಾಂತರ ಸಂಪರ್ಕಿಸುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಇಂದು ಸಂಜೆ ನಾನೇ ಆ ಸ್ಥಳಕ್ಕೆ ಬೇಟಿ ನೀಡಿ, ಅಲ್ಲಿ ಏನಾಗಿದೆ, ಪರಿಹಾರವೇನು

ಕೊಡಬೇಕು, ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬುದನ್ನು ನಾನೇ ನಿರ್ಧಾರ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಸಿ ಬಾಲಕೃಷ್ಣ : ಅಲ್ಲಿ strike ನಡೆಯುತ್ತಿರುವ ಕಾರಣದಿಂದ ತಕ್ಷಣವೇ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ನಿನ್ನೆಯೇ ಜಲಮಂಡಳಿಯ ಅಧಿಕಾರಿಗಳು spot ಗೆ ಹೋಗಿದ್ದಾರೆ. ಇನ್ನೊಂದು ಆಯಾಮವಿದ್ದು, ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೇವೆ.

16) ವಿಷಯ : **ರಾಮನಗರ ವಿಭಾಗದ ಪೋತಲಿಂಗನ ಹಳ್ಳಿಯ SRS ಬೆಟ್ಟದ ದೇವಸ್ಥಾನದ ರಸ್ತೆ ಕಾಮಗಾರಿಗೆ ಕರೆಯಲಾದ ಟೆಂಡರ್‌ನಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ**

ಶ್ರೀ ಕೆ. ಎಂ. ಶಿವಲಿಂಗೇಗೌಡ : ಲೋಕೋಪಯೋಗಿ ಇಲಾಖೆ ಬೆಂಗಳೂರು ವೃತ್ತ ವ್ಯಾಪ್ತಿಯ ರಾಮನಗರ ವಿಭಾಗದ ಪೋತಲಿಂಗನ ಹಳ್ಳಿಯ SRS ಬೆಟ್ಟದ ದೇವಸ್ಥಾನದ ರಸ್ತೆ ಕಾಮಗಾರಿಯಲ್ಲಿ ಟೆಂಡರ್ ಕರೆದು, ಒಂದು ಟೆಂಡರನ್ನು ಡಬ್ಬಕ್ಕೆ ಹಾಕಿದ ಮೇಲೆ, ಇ-ಮೇಲ್ ಟೆಂಡರ್‌ನ್ನು ಪೋಸ್ಟ್‌ಪೋನ್ ಮಾಡಿ, ನಂತರ ಬೇರೊಬ್ಬರಿಂದ ಟೆಂಡರನ್ನು ಪಡೆದು ಅನ್ಯಾಯ ಮಾಡಿದ್ದಾರೆಂಬುದನ್ನು ಶಾಸಕರಾದ ಶ್ರೀ ರಾಜು ಅವರು ಪ್ರಸ್ತಾಪ ಮಾಡಿದ್ದಾರೆ. ಆ ಪ್ರಶ್ನೆಯನ್ನು ಕೇಳುವುದಕ್ಕೆ ನನಗೆ ಹೇಳಿದ್ದರು. ದಯವಿಟ್ಟು ಇದರ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರು ಉತ್ತರ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಸದಸ್ಯರ ದೂರುಗಳ ಬಗ್ಗೆ ಇಲಾಖೆಯಿಂದ ವಿಚಾರಣೆ ಮಾಡಿ ಅವರಿಗೆ ಉತ್ತರವನ್ನು ಒದಗಿಸಲಾಗುತ್ತದೆ.